ವೃತ್ತಿ ನಿಮಿತ್ತ ಚೆನ್ನೈಯಲ್ಲಿ ವಾಸವಾಗಿರುವ ಕೆ.ಎಲ್. ಶ್ರೀವತ್ಸ ಕನ್ನಡಿಗರು. ಬಿಎಸ್‌ಎನ್‌ಎಲ್‌ನಲ್ಲಿ ಕಳೆದ ಮೂರು ದಶಕಗಳಿಂದ ವೃತ್ತಿ ನಿರ್ವಹಿಸುತ್ತಿರುವ ಅವರು ಬಾಲ್ಯದಿಂದಲೂ ಕನ್ನಡ ಸಾಹಿತ್ಯದ ಕಡೆಗೆ ಒಲವುಳ್ಳವರು. ಓದಿನ ಜೊತೆಗೆ ಬರವಣಿಗೆಯನ್ನು ರೂಢಿಸಿಕೊಂಡು, ಕಥೆ, ಪ್ರಬಂಧ, ಕಾವ್ಯ ಕ್ಷೇತ್ರಗಳಲ್ಲಿ ಕೃಷಿ ಮಾಡಿದವರು.

ಕತ್ತರಿಸಿಟ್ಟ ಸ್ಪಾಂಜಿನ ಚೌಕದ ಮೃದುಗಟ್ಟಿಗಳು ಇಂತಹ ಅಳಿಸುವ ಕೆಲಸಕ್ಕೆ ಬಳಕೆಯಾಗತೊಡಗಿದವು. ಹೀಗೆ ಅಳಿಸುವ ಪರಿಜ್ಞಾನ ಹೆಚ್ಚಿದಂತೆಲ್ಲ, ಪೆನ್ಸಿಲ್‌ಗಳಲ್ಲಿ ಬರೆದದ್ದನ್ನು ಅಳಿಸುವುದಕ್ಕೆ ಪ್ರಯತ್ನಗಳು, ಪ್ರಯೋಗಗಳು ನಡೆಯುತ್ತಲೇ ಇದ್ದವು. ಗ್ರಾಫೈಟಿನಿಂದ, ಇದ್ದಿಲ ಉಂಡೆಗಳಿಂದ ಬರೆದದ್ದನ್ನು ಅಳಿಸಲು ಮೊದಮೊದಲಿಗೆ ಒಂದು ಬಗೆಯ ಮೇಣವನ್ನು ಉಪಯೋಗಿಸುವ ಪರಿಪಾಠ 'ರಬ್ಬರ್' ಎಂಬ ಹೊಸ ಆವಿಷ್ಕಾರದಿಂದ ಬದಲಾಗಿ, ಬಹುದೊಡ್ಡ ಕ್ರಾಂತಿಯೇ ಉಂಟಾಯಿತೆನ್ನಬಹುದು. ವಿಶೇಷವೆಂದರೆ, ಈ ರಬ್ಬರ್ ಬಳಕೆಗೆ ಬರುವ ಮುನ್ನ, ಬಿದಿರಿನ ಹಾಳೆಗಳ (ಪ್ಯಾಪಿರಸ್) ಮೇಲೆ ಬರೆದುದನ್ನು ಅಳಿಸಲು ಒಂದು ಪ್ರಭೇದದ ಬ್ರೆಡ್ - ಖರ್ಚು ಕಮ್ಮಿ ಎನ್ನುವ ಕಾರಣದಿಂದ ಉಪಯೋಗಿಸಲಾಗುತ್ತಿತ್ತಂತೆ. ಹೀಗಿರುತ್ತಿರಲಾಗಿ, 1770ರಲ್ಲಿ ಎಡ್ವರ್ಡ್ ನೈರ್ನ್ ಎನ್ನುವ ವಿಜ್ಞಾನಿ ಹೊಸ ಅನ್ವೇಷಣೆಯ ಸ್ಪರ್ಧೆಯೊಂದರಲ್ಲಿ ಭಾಗವಹಿಸುವ ಉತ್ಸಾಹದಲ್ಲಿ, ಆ ಬ್ರೆಡ್ ತುಂಡಿನ ಬದಲಾಗಿ, ನೈಸರ್ಗಿಕವಾಗಿ ಸಿಗುತ್ತಿದ್ದ ಒಂದು ಅಂಟು ದ್ರವದಿಂದ 'ರಬ್ಬರಿನ' ಚಚ್ಚೌಕ ತುಂಡುಗಳನ್ನು ತಯಾರಿಸುವುದನ್ನು ಅರಿತುಕೊಂಡ. ಆ ತುಂಡನ್ನು ತೀಡಿದಾಗ ಕಾಗದದ ಮೇಲಿದ್ದ ಗ್ರಾಫೈಟ್ ಗುರುತುಗಳು, ಕಾಗದಕ್ಕೆ ಹಾನಿಯಾಗದಂತೆ ಅಳಿಸಿಹೋದವು...! ರಬ್ಬರ್ 'ಎರೇಸರ್'ಮಾರುಕಟ್ಟೆಗೆ ಬಂದೇ ಬಿಟ್ಟಿತು...! ಅಂತೂ ನೈಸರ್ಗಿಕ ರಬ್ಬರ್ ತಯಾರಿಸಿದ ಆ ಪುಣ್ಯಾತ್ಮ ಎಡ್ವರ್ಡ್, ಅರ್ಧ ಇಂಚಿನ ರಬ್ಬರ್ ತುಂಡನ್ನು 3 ಶಿಲ್ಲಿಂಗ್ ದರ ನಿಗದಿ ಮಾಡಿ ಮಾರತೊಡಗಿದ. ಜನ ಮುಗಿಬಿದ್ದು ಕೊಳ್ಳತೊಡಗಿದರು! ಹೀಗೆ ಆರಂಭವಾದ 'ರಬ್ಬರಿನ' ಕಥೆ ಆಮೇಲೆ, ಇನ್ನಷ್ಟು ವೈಜ್ಞಾನಿಕ ಸಂಶೋಧನೆಗಳಿಗೆ ಈಡಾಗಿ, ರಬ್ಬರಿನ ಮೂಲ ದ್ರವದೊಂದಿಗೆ ಗಂಧಕದ ಡೈಕ್ಲೋರೈಡ್ ಸೇರಿಸಿದ್ದರಿಂದ ಇನ್ನಷ್ಟು ತಾಳಿಕೆ-ಬಾಳಿಕೆ ಪಡೆದುಕೊಂಡಿತು. ಆಮೇಲೆ, ವಿನೈಲ್-ಪ್ಲಾಸ್ಟಿಕ್ ರಬ್ಬರುಗಳು, ಪುರಾತತ್ವ ಪಳೆಯುಳಿಕೆಗಳ ಮೇಲೆ ಕಟ್ಟಿಕೊಳ್ಳುವ ಇಂಗಾಲದ ಕೊಳೆಯನ್ನು ಕಿತ್ತುಹಾಕಲು ಬಳಸುವ ಫೈಬರ್ ಗಾಜಿನ ಸಮ್ಮಿಶ್ರಣದ ರಬ್ಬರುಗಳು – ಹೀಗೆ ವಿಭಿನ್ನ ಶೈಲಿಯ 'ಅಳಿಸು' ಸಾಧನೆಗಳ ಜೊತೆಗೆ, 1932ರಲ್ಲಿ ಆರ್ಥರ್ ಡ್ರೆಮೆಲ್ ಎಂಬಾತ ಕಂಡುಹಿಡಿದ ತಿರುಗು-ರಾಟೆಗೆ ರಬ್ಬರಿನ ದಪ್ಪ ಹಾಳೆಗಳನ್ನು ಅಂಟಿಸಿದ, ಆ ತಿರುಗಾಣಿಗೆ ವಿದ್ಯುತ್ ಮೋಟಾರನ್ನು ಹೊಂದಿಸಿರುವ 'ವಿದ್ಯುತ್ ಚಾಲಿತ' ರಬ್ಬರ್ ಯಂತ್ರಗಳೂ ಮಾರುಕಟ್ಟೆಯಲ್ಲಿ ರಾರಾಜಿಸತೊಡಗಿದವು. ಹೀಗೆಲ್ಲಾ ನಡೆಯುತ್ತಿರುವಾಗಲೇ 'ಅಳಿಸುವುದು' ದಿನದಿಂದ ದಿನಕ್ಕೆ ಹೆಚ್ಚು ಸುಲಭವಾಗತೊಡಗಿತ್ತು.

ಕೈಯಲ್ಲಿ ಬರೆದುದನ್ನು ಹೀಗೆ 'ಅಳಿಸುವುದನ್ನು' ಸುಲಭ ಸಾಧ್ಯವಾಗಿಸಿದ ಈ ಮಾತುಗಳು ಹಾಗಿರಲಿ, ಯಂತ್ರಾಂಶ, ತಂತ್ರಾಂಶಗಳೇ ತುಂಬಿಕೊಳ್ಳುತ್ತಿರುವ ಈ ಡಿಜಿಟಲ್ ಯುಗದ 'ಬರಹಗಳ' ಹಣೆ ಬರಹವನ್ನೂ ನೋಡಬೇಕಾಗಿದೆಯಲ್ಲ. ನಿತ್ಯದ ಬಳಕೆಯ ಗಣಕ ಯಂತ್ರಗಳು, ಲ್ಯಾಪ್ಟಾಪುಗಳು, ಮೊಬೈಲುಗಳು, ಟ್ಯಾಬ್ಲೆಟ್ಟುಗಳು... ತಾವೇ ತಾವಾಗಿ ನಡೆಯುತ್ತಿರುವುದಾದರೂ, ಅದರೊಳಗೆ ಯಾರೋ ತಂತ್ರಜ್ಞರು 'ಬರೆದಿಟ್ಟ' ಸೂಚನೆಗಳಿಂದಲೇ! ಅಂತಹ ಸೂಚನೆಗಳಿಗೆ 'ಅಳಿಸಿ ಹೋಗುವ' ಭಯ ಇಲ್ಲದೆ ಹೋದೀತೇ? ಈ ಉಪಕರಣಗಳನ್ನು 'ಆಡಿಸಿ ನೋಡು, ಬೀಳಿಸಿ ನೋಡು ಅಳಿಸಿಹೋಗದು' ಎಂದು ನಂಬಿ ಕೂಡಲಾಗದೆಂದು ಮನುಷ್ಯ ಈಗಾಗಲೇ ಅರಿತುಕೊಂಡಿದ್ದಾನೆ. ಮೇಲಿಂದ ಜಾರಿ ಬಿದ್ದೋ, ನೀರಿನಿಂದ ಒದ್ದೆಯಾಗಿಯೋ, ತಪ್ಪು ಯಾ ಅತೀ ಬಳಕೆಯ ಕೃಪೆಯಿಂದಲೋ ಈ ಡಿಜಿಟಲ್ ಸಲಕರಣೆಗಳ ಹೃದಯ (ಅಥವಾ ಮೆದುಳು ಎನ್ನೋಣ) ಸ್ತಂಭನವಾಗಿ, ಅವನ್ನೇ ನೆಚ್ಚಿರುವ ಬದುಕುಗಳೂ ನಿಂತು ಹೋಗುತ್ತಿರುವುದು ಸರ್ವವಿಧಿತ. ಇದಕ್ಕೆ ಕಾರಣ: ಈ